ಆಗುತ್ತಿರಲಿಲ್ಲ. ಈಗ ಎಲ್ಲಾ ರೀತಿಯಿಂದ ಸರಿಯಾಗಿದೆ. ಯಾವುದೇ ರೀತಿ ತೊಂದರೆ ಆಗುವುದಿಲ್ಲ.

ಅಧ್ಯಕ್ಷರು : ಗೋವಿಂದ ಎಂ.ಕಾರಜೋಳ

2) ವಿಷಯ: ಚಾಮರಾಜನಗರ ಜಿಲ್ಲೆಯಲ್ಲಿ ಶ್ರೀ ಸುರೇಶ್, J.E., ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ.

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ): ಸನ್ಮಾನ್ಯ ಸಭಾಧ್ಯಕ್ಷರೆ, ಚಾಮರಾಜನಗರ ಜಿಲ್ಲೆಯಲ್ಲಿ,

ಅಧ್ಯಕ್ಷರು : ಅದು ಬೇಡ, ನೋಟಿಸಿನಲ್ಲಿ ಯಾವ ವಿಚಾರ ಇದೆ ಅದರ ಬಗ್ಗೆ ಹೇಳಿ.

ಶ್ರೀ ಗೋವಿಂದ ಎಂ.ಕಾರಜೋಳ : ನೋಟೀಸಿನಲ್ಲಿರುವ ವಿಚಾರವೇ,

ಅಧ್ಯಕ್ಷರು : ಅದು ಹೇಗೆ ಬರುತ್ತದೆ? ಅದು ಬೇಡ, ನೋಟಿಸಿನಲ್ಲಿ ಏನು ಕೊಟ್ಟಿದ್ದೀರಿ ಆ ವಿಷಯದ ಬಗ್ಗೆ ಪ್ರಸ್ತಾಪ ಮಾಡಿ.

ಶ್ರೀ ಗೋವಿಂದ ಎಂ.ಕಾರಜೋಳ : ಅದನ್ನೇ, ಅದರ ಆಧಾರದ ಮೇಲೆ ಇರುವುದಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು : ಆಯಿತು, ಚರ್ಚೆ ಮಾಡುವ ಹಾಗಿಲ್ಲ, ನೀವು ಪ್ರಶ್ನೆ ಕೇಳಿ.

ಶ್ರೀ ಗೋವಿಂದ ಎಂ.ಕಾರಜೋಳ : ಸುರೇಶ್ ಎಂಬ Junior Engineer ಸೀಮೆ ಎಣ್ಣೆಯನ್ನು ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡರು. ಇದು ಮೊದನೆಯದಲ್ಲ, ಗ್ರಾಮ ಪಂಚಾಯಿತಿ ನೌಕರರ ಮೇಲೆ, PDO ಗಳ ಮೇಲೆ, ಗ್ರಾಮ ಪಂಚಾಯಿತಿ ನೌಕರರ ಮೇಲೆ, ಸಾಕಷ್ಟು ದೌರ್ಜನ್ಯ ಪ್ರಕರಣಗಳು ಆಗುತ್ತಿರುತ್ತವೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇಂಥ ಪ್ರಕರಣಗಳಲ್ಲಿ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಇದು demand ಮೇಲೆ ಚರ್ಚೆ ಮಾಡುವಂಥದ್ದಲ್ಲ. ಸೀಮಿತವಾಗಿರುವ ಪ್ರಶ್ನೆ ಇದು.

ಶ್ರೀ ಗೋವಿಂದ ಎಂ.ಕಾರಜೋಳ : ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕೇಸ್ ಹಾಕಿ ಒಳಗೆ ಹಾಕುವಂಥ ಕೆಲಸ ಮಾಡಬೇಕು ಎಂದು ಒತ್ತಾಯವನ್ನು ಮಾಡುತ್ತೇನೆ.

ಅಧ್ಯಕ್ಷರು : ಪಾಟೀಲರೆ, ಉತ್ತರ ಹೇಳಿ.

ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :–

ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದಂಥ ವಿಚಾರ. ಈ ಭ್ರಷ್ಟಾಚಾರದ ವಿರುದ್ಧ ಸಂಘರ್ಷ ಮಾಡುವಂಥ ಕೆಲವು ಪ್ರಾಮಾಣಿಕ ಅಧಿಕಾರಿಗಳು ಬಹಳಷ್ಟು humiliation, harassmentಗೆ ಒಳಗಾಗಿರುವಂಥ ಪ್ರಸಂಗದಲ್ಲಿ ಇದು ಒಂದು. ಈಗಾಗಲೇ ಈ ಸುರೇಶ್ ಎನ್ನುವವರ ಆತ್ಮಹತ್ಯೆ, ಆ ಸನ್ನಿವೇಶ ಸೃಷ್ಟಿಯಾಗಲಿಕ್ಕೆ ಕಾರಣವಾಗಿರುವಂಥ ಅಧ್ಯಕ್ಷರನ್ನು, ಪಿ.ಡಿ.ಓ. ರವರನ್ನು ಈಗಾಗಲೇ arrestಮಾಡಿದ್ದಾರೆ. ಇದರ ಬಗ್ಗೆ ವಿವರವಾಗಿರುವಂಥ statement ಮಾಡುತ್ತೇವೆ.

ಅಧ್ಯಕ್ಷರು : OK. ಪ್ರಸನ್ನಕುಮಾರ್,

3) ವಿಷಯ : ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗೆ Administrative Officers ಭರ್ತಿ ಮಾಡುವ ಬಗ್ಗೆ.

ಶ್ರೀ ಕೆ.ಬಿ. ಪ್ರಸನ್ನಕುಮಾರ್ (ಶಿವಮೊಗ್ಗ) ಜಿಲ್ಲಾ ಆಸ್ಪತ್ರೆ ಮತ್ತು ಸರ್ಕಾರಿ ಮೆಡಿಕಲ್ ಕಾಲೇಜು ಇದೆ, ಇಲ್ಲಿ 17 administrative posts ಇವೆ. ಅದರಲ್ಲಿ 5 posts ನಲ್ಲಿ ಮಾತ್ರ ಕೆಲಸ ಮಾಡುತ್ತಿದ್ದಾರೆ, ಇನ್ನು 12 ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ counseling ನಾಳೆ ದಿವಸ ಪ್ರಾರಂಭವಾಗುತ್ತಿದೆ, ಆದರೆ ಖಾಲಿ ಇರುವ ಹುದ್ದೆಗಳ ವಿವರವನ್ನು net ನಲ್ಲಿ ತೋರಿಸುತ್ತಿಲ್ಲ. ಹತ್ತು ದಿವಸಗಳ ಹಿಂದೆ ಹುದ್ದೆಗಳು ಖಾಲಿ ಇವೆ ಎಂದು netನಲ್ಲಿ ತೋರಿಸುತ್ತಿತ್ತು. ಈಗ ತೋರಿಸುತ್ತಿಲ್ಲ.

ಅಧ್ಯಕ್ಷರು : ಅದಕ್ಕೆ ಏನು ಮಾಡಬೇಕೆಂದು ಹೇಳಿ.

ಶ್ರೀ ಕೆ.ಬಿ. ಪ್ರಸನ್ನಕುಮಾರ್ : ಸಂಬಂಧಪಟ್ಟವರನ್ನು ಕೇಳಿದರೆ, ಆರೋಗ್ಯ ಇಲಾಖೆಯವರು.,

ಅಧ್ಯಕ್ಷರು : ನೀವು ನೀವು ಚರ್ಚೆ ಮಾಡಿ, ಸರ್ಕಾರ ಏನು ಮಾಡಬೇಕು ಎಂದು ಹೇಳಿ.

ಶ್ರೀ ಕೆ.ಬಿ.ಪ್ರಸನ್ನಕುಮಾರ್ : ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಆ ಹುದ್ದೆಗಳನ್ನು ಮೆಡಿಕಲ್ ಕಾಲೇಜುನವರು ಭರ್ತಿ ಮಾಡಬೇಕೆಂದು ಆರೋಗ್ಯ